[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 454/2024**

ಸಾಕ್ಷಿದಾರನ ಹೆಸರು ಃ ಸಯ್ಯದ್ ಯುನಿಸ್ ಪಿ.ಡಬ್ಲ್ಯೂಃ 1

ತಂದೆಯ ಹೆಸರುಃ ಅಮಿರ್ ಸಾಹೇಬ್ ಸಿ.ಡಬ್ಲ್ಯೂಃ 1

ಪ್ರಾಯ ಃ 59 ವರ್ಷ

ಉದ್ಯೋಗ ಃ ಕನ್ಸ್ಟ್ರಕ್ಷನ್

ವಾಸ ಃ ಕಾರ್ಕಳ

ದಿನಾಂಕ 02-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆರೋಪಿತರು ನನ್ನ ಸೊಸೆಯ ಮಾವ ಮತ್ತು ಭಾವ.

ಚಾಸಾ-2 ಮತ್ತು 3 ಪರಿಚಯ ಇದೆ. ಚಾಸಾ 2 ನನ್ನ ಮಗ. ಚಾಸಾ 3 ನನ್ನ ಅಣ್ಣನ ಮಗ. ದಿಃ 10-01-2024 ರಂದು ಸುಮಾರು 4.30 ಗಂಟೆಗೆ ನನ್ನ ಮಗನ ಮತ್ತು ಸೊಸೆಯ ನಡುವೆ ಮನಸ್ತಾಪ ಇದ್ದು ಕಾರ್ಕಳ ಮುಸ್ಲಿಂ ಜಮಾತ್ ನ ಅಧ್ಯಕ್ಷರು ಮತ್ತು ಗುರುಗಳು ಪಂಚಾಯತ್ ಸಲುವಾಗಿ ಬರಲು ತಿಳಿಸಿದ್ದು ಅದರಂತೆ ನಾನು ಮತ್ತು ನನ್ನ ಮಗ ಹೋಗಿರುತ್ತೇವೆ. ನಂತರ ಪಂಚಾಯತ್ ಆಗಿ ನಾನು ಮನೆಗೆ ಹೊರಡುವ ಸಮಯದಲ್ಲಿ ಮಗುವನ್ನು ಸೊಸೆ ನಿಸ್ಬಬಾನು ತೆಗೆದುಕೊಂಡಿರುತ್ತಾರೆ. ಕೂಡಲೇ 1 ಮತ್ತು 2 ನೇ ಆರೋಪಿತರು ಮಗುವನ್ನು ಕಿತ್ತುಕೊಂಡು ನಂತರ " ಹಡಬೆ, ಬೇವಾರ್ಸಿ" ಎಂದು ಅವ್ಯಾಚ ಶಬ್ದಗಳಿಂದ ಬೈದು ಮಗನ ಕಾಲರ್ ಹಿಡಿದು ಎಳೆದು ಕುತ್ತಿಗೆಯನ್ನು ಒತ್ತಿ ಹಿಡಿದುಕೊಂಡಿರುತ್ತಾರೆ. ನಾನು ಬಿಡಿಸಲು ಹೋದಾಗ 1 ನೇ ಆರೋಪಿ ನನ್ನ

ಬಲಗೈಯ ಮಧ್ಯದ ಬೆರಳಿಗೆ ಕಚ್ಚಿರುತ್ತಾರೆ ಅದರಿಂದ ಬೆರಳಿನ ಕೆಳಗಡೆ ಮತ್ತು ಮೇಲುಗಡೆ ರಕ್ತ ಗಾಯವಾಗಿರುತ್ತದೆ. ನಂತರ ನನ್ನ ಮಗನಿಗೆ ಮತ್ತು ನನಗೆ 1 ಮತ್ತು 2 ನೇ ಆರೋಪಿತರು ಸೇರಿ ಎದಗೆ ಹಾಗೂ ಸೊಂಟಕ್ಕೆ ಬೆನ್ನಿಗೆ ಹೊಡೆದಿರುತ್ತಾರೆ. ಆನಂತರ ಸಾರ್ವಜನಿಕರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ 1 ನೇ ಆರೋಪಿ ಕಾರಿನಲ್ಲಿ ಮತ್ತು 2 ನೇ ಆರೋಪಿ ಮೋಟಾರು ಸೈಕಲ್ ನಲ್ಲಿ ಹೋಗಿರುತ್ತಾರೆ. ನಂತರ ನಾವು ಮನೆಗೆ ಹೋಗಿರುತ್ತೇವೆ. ಮನೆಯಲ್ಲಿ ನನಗೆ ತಲೆ ಸುತ್ತು ಬಂದಿದ್ದು, ಚಾಸಾ 2 ಮತ್ತು 3 ರವರು ನನ್ನನ್ನು ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿರುತ್ತಾರೆ. ಈ ಕುರಿತು ಆರೋಪಿತರ ವಿರುದ್ದ ಮರುದಿನ ಬೆಳಿಗ್ಗೆ ಪಿರ್ಯಾದಿ ನೀಡಿರುತ್ತೇನೆ. ಘಟನೆ ಕುರಿತು ಮರುಹೇಳಿಕೆ ಕೊಟ್ಟಿರುತ್ತೇನೆ.

ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲಿಸರು ಸಂಜೆ ನಾನು ತೋರಿಸಿಕೊಟ್ಟಂತೆ ಸ್ಥಳಕ್ಕೆ ಬಂದು ಚಾಸಾ 5 ಮತ್ತು 6 ರವರ ಸಮಕ್ಷಮ ಸ್ಥಳ ಮಹಜರು ಮಾಡಿರುತ್ತಾರೆ ಮತ್ತು ಭಾವಚಿತ್ರ ತೆಗೆದಿರುತ್ತಾರೆ.

ಸಾಕ್ಷಿಯು ತಕ್ಷೀರು ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ತಕ್ಷೀರು ತನಿಖಾ ಕಾಲದಲ್ಲಿ ತೆಗೆದ ಭಾವಚಿತ್ರದಲ್ಲಿ ತಾವು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಸಾಕ್ಷಿಯು ತಕ್ಷೀರಿಗೆ ಸಂಬಂಧಿಸಿದ ಕಾರು ಮತ್ತು ಬೈಕ್ ಭಾವಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಶ್ರೀ ಎ ಕೆ ಹೆಚ್ ವಕೀಲರಿಂದ ಃ

ನನ್ನ ವಿರುದ್ಧ ಸಂದೀಪ್ ಎಂಬುವವರು ಸಿಸಿ 584/22 ಚೆಕ್ಕು ಅಮಾನ್ಯ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ನನಗೆ ಶಿಕ್ಷೆಯಾಗಿದ್ದು ನಾನು ಮೇಲ್ಮನವಿ ಹೋಗಿರುತ್ತೇನೆ ಎಂದರೆ ಸರಿ. ಚಾಸಾ 2 ರವರ ಮದುವೆ ದಿಃ 26-01-2022 ರಂದು ನಿಸ್ಬಬಾನು ಎಂಬುವವರೊಂದಿಗೆ ಆಗಿರುತ್ತದೆ. ಅವರದ್ದು ಪ್ರೇಮ ವಿವಾಹವಾಗಿದ್ದು ನಂತರ ಮನೆಯವರು ಒಪ್ಪಿ ಮದುವೆ ಮಾಡಿರುತ್ತೇವೆ. ಮದುವೆಯಾದ ನಂತರ ಮನೆಯಲ್ಲಿ ನಿಸ್ಬಬಾನು ಮತ್ತು ನನ್ನ ಮಗನಿಗೆ ಗಲಾಟೆ ಆಗುತ್ತಿತ್ತು ಎಂದರೆ ಸರಿ. ಹಾಗಾಗೀ ನಿಸ್ಬಬಾನು ಕಾರ್ಕಳದ ಟೈಟಾನಿಕ್ ಬಿಲ್ಡಿಂಗ್ ನಲ್ಲಿ ಬೇರೆ ಬಾಡಿಗೆ ಮನೆ ಮಾಡಿ 3 ತಿಂಗಳು ವಾಸ ಇದ್ದು ನಂತರ ಕಾರ್ಕಳದ ಕಲ್ಲೊಟೆಯಲ್ಲಿ ಬೇರೆ ಬಾಡಿಗೆ ಮನೆ ಮಾಡಿರುತ್ತಾರೆ ಎಂದರೆ ಸರಿ. ನಂತರ ಚಾಸಾ 2 ಕಿರುಕುಳ ನೀಡಿದರೂ ಎಂದು ಅಲ್ಲಿ ಮನೆ ಕಾಲಿ ಮಾಡಿ ತಾಯಿ ಮನೆ ಸೇರಿರುತ್ತಾರೆ ಎಂದರೆ ನನ್ನ ಮಗ ಕಿರುಕುಳ ನೀಡಿರುವುದಿಲ್ಲ.

ನಾನು ಅಥವಾ ಚಾಸಾ 2 ನಿಸ್ಬಬಾನು ವಿರುದ್ಧ ಯಾವುದೇ ಪಿರ್ಯಾದಿಯನ್ನು ಜಮಾತ್ ಗೆ ನೀಡಿರುವುದಿಲ್ಲ. ನಾನು ಮತ್ತು ನನ್ನ ಮನೆಯವರು ನಿಸ್ಬಬಾನುಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಡುತ್ತಿದ್ದೇವೆ ಎಂದು ಜಮಾತ್ ಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಆ ದೂರಿನ ಆಧಾರದ ಮೇಲೆ ನನ್ನನ್ನು ಮತ್ತು ನಮ್ಮ ಮನೆಯವರನ್ನು ದಿಃ 10-04-2024 ರಂದು ಪಂಚಾಯತ್ ಗೆ ಕರೆದಿರುತ್ತಾರೆ ಎಂದರೆ ಸರಿ. ಸದರಿ ಪಂಚಾಯತ್ ಗೆ ನಿಸ್ಬಾ, ದಿಲೀಪ್, ರೇಷ್ಮಾ, ಅನ್ವರ್ ಮತ್ತು ಆಶೀಶ್ ಹಾಗೂ ನಿಸ್ಬಾ ತಾಯಿ ಮಹಿಮುನ್ನ ಬಂದಿದ್ದರು ಎಂದರೆ ಸರಿ. ನಮ್ಮ ಕಡೆಯಿಂದ ನಾನು ಮತ್ತು ಚಾಸಾ 2 ಮಾತ್ರ ಹೋಗಿರುತ್ತೇವೆ ಜಮಾತ್ ನಲ್ಲಿ ಸುಮಾರು 2 ಗಂಟೆ ಮಾತುಕತೆ ಆಯಿತು. ಅಲ್ಲಿ ನಿಸ್ಬಾ ನಾನು ಮತ್ತು ನನ್ನ ಮನೆಯವರು ಅವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತೇವೆ ಎಂದು ಬರವಣಿಗೆಯಲ್ಲಿ ದೂರು ನೀಡಿದ್ದರು. ಸದರಿ

ದೂರನ್ನು ನಮಗೆ ಓದಿ ಹೇಳಿರುತ್ತಾರೆ. ಆ ದಿನ ಯಾವುದೇ ಇತ್ಯಾರ್ಥ ಆಗದೇ ಒಂದು ತಿಂಗಳ ವಾಯಿದೆ ನೀಡಿರುತ್ತಾರೆ. ಜಮಾತ್ ನಲ್ಲಿ ನಿಸ್ಬಾಬಾನು ರವರು ಚಾಸಾ 2 ರವರಿಗೆ ಬೇರೆಯವರೊಂದಿಗೆ ಅಕ್ರಮ ಸಂಬಂಧ ಇದೆ ಎಂದು ಆರೋಪಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆರೋಪಿವನ್ನು ನಾವು ಅಲ್ಲಗೆಳೆದಿರುತ್ತೇವೆ.

ನಾನು ನನ್ನ ಮಗ ನಿಸ್ಬಾಬಾನುರವರ ಮಗುವನ್ನು ಬಲಾತ್ಕಾರವಾಗಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮುಂದುವರಿದು ಜಮಾತ್ ನಲ್ಲಿ ಎಲ್ಲರ ಮುಂದೆಯೇ ಮಗುವನ್ನು ಚಾಸಾ-2 ತೆಗೆದುಕೊಂಡಿರುತ್ತಾರೆ ಹಾಗೂ ಕೆಳಗಡೆ ಕರೆದುಕೊಂಡು ಬಂದಿರುತ್ತಾರೆ. ನನ್ನ ಮಗ ನಿಸ್ಬಾಬಾನುರವರಿಗೆ ಮಗುವನ್ನು ಕೊಡದೇ ಇದ್ದ ಕಾರಣ ಗಲಾಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಮಗುವನ್ನು ಚಾಸಾ 2 ರವರು ನಿಸ್ಬಾಬಾನುಗೆ ಕೊಟ್ಟಿರುವುದಿಲ್ಲ. ಚಾಸಾ 2 ರವರು ಮಗುವನ್ನು ನಿಸ್ಬಾಬಾನು ರವರಿಗೆ ಕೊಡದೇ ಓಡಿಹೋಗಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಜಮಾತ್ ನ ಮೆಟ್ಟಿಲಿನ ಕೆಳಗೆ ರಸ್ತೆಯಲ್ಲಿ ಆಗಿರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಜೋರು ಗಲಾಟೆ ಆಗಿರುತ್ತದೆ. ಜಮಾತ್ ಬಿಲ್ಡಿಂಗ್ ಕೆಳಗಡೆ ನಾಲ್ಕು ಅಂಗಡಿ ಇದೆ ಎಂದರೆ ಸರಿ. ಜಮಾತ್ ನ ಕೆಳಗಿನ ರಸ್ತೆ ಕಾರ್ಕಳ-ಉಡುಪಿ ಹೆದ್ದಾರಿ. ಆ ಸಮಯದಲ್ಲಿ ತುಂಬಾ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಗಲಾಟೆಯನ್ನು ಸಾರ್ವಜನಿಕರು ನೋಡಿ ಬಂದು ಬಿಡಿಸಿರುತ್ತಾರೆ. ಅವರುಗಳ ಹೆಸರುಗಳು ಗೊತ್ತಿರುವುದಿಲ್ಲ.

1 ನೇ ಆರೋಪಿ ನನಗೆ ಕೈಗೆ ಕಚ್ಚಿದ ಕೂಡಲೇ ನನಗೆ ರಕ್ತ ಬಂದಿರುತ್ತದೆ. ರಕ್ತ ಬಟ್ಟೆಗಳಿಗೆ ತಾಗಿರುವುದಿಲ್ಲ. ಸದರಿ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ನನ್ನ ಮನೆ ಜಮಾತ್ನಿಂದ ಎರಡೂವರೆ ಕಿ ಮೀ ದೂರ ಹಿರ್ಗಾನ ಗ್ರಾಮದಲ್ಲಿ ಇದೆ. ನನ್ನ ಮನೆ ಜಮಾತ್ ನಿಂದ 4 ಕಿ ಮೀ ದೂರ ಇದೆ ಎಂದರೆ ಸರಿಯಲ್ಲ. ನಿಪಿ-1 ದೂರು ನೀಡುವಾಗ ವಾಹನಗಳ ನೊಂದಾಣಿ ಸಂಖ್ಯೆ ನೀಡಿರುವುದಿಲ್ಲ. ನನ್ನ ಮನೆಯಿಂದ ಹತ್ತಿರದ ಆಸ್ಪತ್ರೆ ಎಂದರೆ ಟಿ ಎಮ್ ಎ ಪೈ ಆಸ್ಪತ್ರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ಸರ್ಕಾರಿ ಆಸ್ಪತ್ರೆಗೆ ಯಾವಾಗಲೂ ಹೋಗುತ್ತೇವೆ. ನಾವು

ಕಾರ್ಕಳ ನರ್ಸಿಂಗ್ ಹೋಮ್ ದಾಟಿಯೇ ಸರ್ಕಾರಿ ಆಸ್ಪತ್ರೆಗೆ ಹೋಗಬೇಕು. ನಾನು, ಚಾಸಾ 2 ಮತ್ತು ಚಾಸಾ 3 ರವರು ಆಸ್ಪತ್ರೆಗೆ ಹೋಗಿರುತ್ತೇವೆ. ವೈದ್ಯರ ಬಳಿ ಯಾರೆಲ್ಲಾ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿರುತ್ತೇನೆ. ನನಗೆ ಸೊಂಟಕ್ಕೆ ಮತ್ತು ಬೆನ್ನಿಗೆ ನೋವಾಗಿದ್ದು ಅದನ್ನು ಸಹ ವೈದ್ಯರ ಬಳಿ ತಿಳಿಸಿರುತ್ತೇನೆ. ಅವರು ಪರೀಕ್ಷಿಸಿರುತ್ತಾರೆ. ಪೋಲಿಸ್ ಠಾಣೆ ದಾಟಿಯೇ ನಮ್ಮ ಮನೆಗೆ ಹೋಗಬೇಕು ಎಂದರೆ ಸರಿ.

ನಿಪಿ-1 ದೂರು ನೀಡುವಾಗ ಚಾಸಾ 2 ರವರು ಹಾಜರಿದ್ದರು. ನಿಪಿ-1 ಅನ್ನು ನಾನೇ ಬರೆದಿರುತ್ತೇನೆ. ಮಹಜರು ಸಾಕ್ಷಿದಾರರನ್ನು ನಾನೇ ಬರಲು ತಿಳಿಸಿರುತ್ತೇನೆ. ಜಮಾತ್‌ನ ಬಳಿ ಇರುವ 4 ಅಂಗಡಿಯವರನ್ನು ಪೋಲಿಸರು ಸಾಕ್ಷಿಯಾಗಿ ಪಡೆದುಕೊಂಡಿರುವುದಿಲ್ಲ. ಪೋಲಿಸರು ಮಹಜರು ಮಾಡುವಾಗ ಸರ್ವಾಜನಿಕರು ನೋಡುತ್ತಿದ್ದರು. ನನಗೆ ಆರೋಪಿತರು ತುಳಿದರು ಎಂದಾಗ ನಾನು ಕೆಳಗೆ ಬಿದ್ದಿರುವುದಿಲ್ಲ. ನಿಪಿ-2 ಅನ್ನು ಸ್ಥಳದಲ್ಲಿ ಮಾಡಿ ಸಹಿ ಪಡೆದಿರುತ್ತಾರೆ. ನಾನು ಮತ್ತು ನನ್ನ ಮಗ ಚಾಸಾ 2 ರವರು ಆರೋಪಿತರ ವಿರುದ್ದ ನಿಸ್ಬಾ ಮತ್ತು ಅವರ ತಾಯಿ ನಮ್ಮ ವಿರುದ್ದ ದೂರು ನೀಡಬಹುದು ಎಂದು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಈಗಲೂ ಕೂಡ ನಿಸ್ಬಾರವರು ನಮ್ಮ ಜೊತೆ ಇಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ 2 ರವರು ನಿಸ್ಬಬಾನುರವರಿಂದ ಮಗುವನ್ನು ಒತ್ತಾಯಪೂರ್ವಕವಾಗಿ ತೆಗೆದುಕೊಂಡ ಕಾರಣ ಮಾತುಕತೆಯಾಗಿರುತ್ತದೆ ಹೊರತು ಯಾವುದೇ ಹಲ್ಲೆಯಾಗಲೀ, ಅವ್ಯಾಚ ಶಬ್ದಗಳ ನಿಂದನೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the other witnesses. As the eye witness Pw 1 have completly turned hostile to the case of prosecution. No purpose will be served by issuance of summons to other witnesses. Hence by rejecting the prayer of learned APP evidence of other witnesses are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 20-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala